# ಅಗ್ಗಳದ ಸತಿ ದುಗ್ಗಳೆ

**ಡಾ.ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

ಹನ್ನೆರಡನೆಯ ಶತಮಾನದ ಶರಣರ ಹಿರಿಯ ಸಮಕಾಲೀನ ಅನುಭಾವಿ, ಆದ್ಯ ವಚನಕಾರ ಜೇಡರ ದಾಸಿಮಯ್ಯ ಶಿವನಿಂದ 'ತವನಿಧಿ'ಯನ್ನು ಪಡೆದು, 'ತವನಿಧಿ ದಾಸಿಮಯ್ಯ'ನೆಂದೇ ಪ್ರಸಿದ್ದನಾದವನು. ಆತನ ಧರ್ಮಪತ್ನಿಯೇ ದುಗ್ಗಳೆ. ವಚನಕಾರರಲ್ಲಿ ಜೇಡರದಾಸಿಮಯ್ಯನು ಎಷ್ಟು ಅಗ್ರಗಣ್ಯನೋ, ದುಗ್ಗಳೆಯೂ ವಚನಕಾರ್ತಿಯರಲ್ಲಿ ಆದ್ಯಳೇ ಆಗಿರಬೇಕು. ಅನುಭವ ಮಂಟಪದ ಶಿವಶರಣೆಯರಿಗೆಲ್ಲ ಆದರ್ಶ ಪ್ರಾಯಳಾಗಿದ್ದಿರಬಹುದಾದ ದುಗ್ಗಳೆಯ ಜೀವನವು ಅನುಪಮ, ಅನುಕರಣೀಯ. ಆಕೆಯ ದಿವ್ಯ ಜೀವನದ ಪ್ರಮುಖ ಘಟನೆಗಳನ್ನು ಚಿತ್ರಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಪತಿಯೇ ಪರದೈವ; ಸತಿಯೇ ಪರಾಶಕ್ತಿ ಪತಿಯ ಹಿತದಲ್ಲಿ ತಮ್ಮ ಹಿತವನ್ನು ಕಂಡುಕೊಂಡು, ಅವರ ಮುಕ್ತಿಸಾಧನೆಗೆ ನೆರವಾಗಿ ಅಮರತ್ವವನ್ನು ಪಡೆದ ಸ್ತ್ರೀಯರ ಶಿರೋಮಣಿ ದುಗ್ಗಳೆ. 'ಸನ್ಯಾಸ ಜೀವನಕ್ಕಿಂತಲೂ ಗೃಹಸ್ಥ ಜೀವನವೇ ಮೇಲು' ಎಂಬುದನ್ನು ಈ ಲೋಕಕ್ಕೆ ತೋರಿಸಿಕೊಟ್ಟ ಆದರ್ಶ ದಾಂಪತ್ಯ ಈ ಶರಣ ಜೀವಿಗಳದು. ಶರಣೆ ದುಗ್ಗಳಾದೇವಿಯು ಜೇಡರ ದಾಸಿಮಯ್ಯನ ಬದುಕಿನ ಬೆಳಕಿಗೆ ಜ್ಯೋತಿಯಾದವಳು; ಅವನ ಒಟ್ಟು ಸಾಧನೆಗೆ ಬೆನ್ನೆಲುಬಾಗಿ ನಿಂತವಳು; ದಾಸಿಮಯ್ಯನ ಭಾಗ್ಯವಾಗಿ ಅವನ ಸರ್ವೋನ್ನತಿಗಾಗಿ ಪ್ರರಿಶ್ರಮ ಪಟ್ಟವಳು; ಒಂದರ್ಥದಲ್ಲಿ ಆತನ ಎಲ್ಲ ಸಾಧನೆ–ಕೀರ್ತಿಗೆ ಕಾರಣಳಾದವಳು.

ಮುದನೂರಿನ ಸಂಕಣ್ಣ–ಶಿವದೇವಿ ಎಂಬ ಶಿವಭಕ್ತ ದಂಪತಿಗಳ ಮಗಳಾದ ದುಗ್ಗವ್ವ (ದುಗ್ಗಳ) ಜೇಡರದಾಸಿಮಯ್ಯನನ್ನು ವಿವಾಹವಾದುದು ಅತ್ಯಂತ ಕುತೂಹಲಕರ ಸನ್ನಿವೇಶವಾಗಿದೆ. ದಾಸಿಮಯ್ಯನ ಇಷ್ಟದೈನ ರಾಮನಾಥನು. ಆತನಿಗೆ ನೆಯ್ಗೆಯ ಕಾಯಕಕೊಟ್ಟು, 'ಆ ಕಾಯಕದಿಂದ ದೊರಕಿದ ಧಾನ್ಯದಿಂದ ದಾಸೋಹ ಮಾಡು' ಎಂದು ಸೂಚಿಸುವನು. ಆಗ ಆ ಭಕ್ತನು 'ನಾನೋರ್ವನು, ನನ್ನಿಂದ ಈ ಮಹಾಕಾರ್ಯವನ್ನು ಮಾಡಿಸಬಹುದೆ ಸ್ವಾಮಿ? ಆಗದು' ಎನ್ನುವನು. ಅದನ್ನು ಕೇಳಿ ರಾಮನಾಥಸ್ವಾಮಿಯು 'ಸಜ್ಜನ ಭಾಮೆಯನು ಪರಿಣಯನವಾಗುತ್ತ ಮಹಾ ಕಾಯಕವ ಮಾಡು' ಎಂದು ಹೇಳಿ ಅಂತರ್ಧಾನನಾಗುವನು.

ಇತ್ತ ದಾಸಿಮಯ್ಯನು ಶಕ್ತಿಯಿಲ್ಲದೆ ಭಕ್ತಿ ನಡೆಯದೆಂದು ಯೋಚಿಸಿ, ತನಗೆ ಅನುರೂಪಳೂ, ಅನುಕೂಲೆಯೂ ಆದ ಕನ್ಯೆಯ ಶೋಧಕ್ಕೆ ಹೊರಟನು. ತನ್ನ ಭಾವೀ ಪತ್ನಿಯನ್ನು ಆಯ್ಕೆ ಮಾಡುವ ಆತನ ವಿಧಾನವಾದರೋ ಬಹು ವಿಲಕ್ಷಣವಾದದ್ದು. ಉಸುಕು ಮತ್ತು ಅಕ್ಕಿಯನ್ನು ಸಮವಾಗಿ ಬೆರೆಸಿ, ಗಂಟಿಕ್ಕಿ, ಕಬ್ಬಿನಗಳವನ್ನು ಕೈಯಲ್ಲಿ ಹಿಡಿದು, 'ನೀರು–ಕಟ್ಟಿಗೆ ಇಲ್ಲದೆ ಪಾಯಸ ಮಾಡಿ ನೀಡಬಲ್ಲ ಹೆಣ್ಣಾದರೆ ಮದುವೆಯಾಗಿ ಸದ್ಭಕ್ತಿಯನ್ನು ನಡೆಸುವೆನು' ಎಂದು ಸಾರಿ, ದೇಶದ ತುಂಬೆಲ್ಲ ಕನ್ಯೆಯ ಅನ್ವೇಷಣೆಗೆ ತೊಡಗಿದನು.

ಅಚ್ಚರಿಗೊಂಡ ಜನ 'ತನಗೆ ಮದುವೆ ಬೇಡವಾದುದರಿಂದ ಈ ಉಪಾಯ ಹೂಡಿ ತಿರುಗುತ್ತಿರುವನು' ಎಂದು ಮುಂತಾಗಿ ಹಾಸ್ಯ ಮಾಡತೊಡಗಿದರು. ದಾಸಿಮಯ್ಯನ ಕನ್ಯಾನ್ವೇಷಣೆ ಹನ್ನೆರಡು ವರ್ಷಗಳವರೆಗೆ ನಡೆಯಿತು! ಒಂದು ಸಲ ಈತನ ಮುಡಿಗೆಯನ್ನು ಒಂದು ಆಹ್ವಾನವೆಂದು ಸ್ವೀಕರಿಸುವ ಚತುರಕನ್ಯ ಸಿಗುವ ಕಾಲ ಕೂಡಿ ಬಂದಿತೆಂಬಂತೆ ದಾಸಿಮಯ್ಯನು ಮುದನೂರಿನ ಸಂಕಣ್ಣನ ಮನೆಗೆ ಬರುತ್ತಾನೆ. ಸಂಕಣ್ಣನಿಗಾದರೋ ಮಗಳನ್ನು ಕೊಟ್ಟು ಮದುವೆ ಮಾಡುವ ಮನಸ್ಸು. ಆದರೆ ದಾಸಿಮಯ್ಯನ ಶರತ್ತು ಅಸಾಧ್ಯವಾದುದು. ಆದುದರಿಂದ ಆತ ಹೊರಟು ನಿಲ್ಲುತ್ತಾನೆ. ಇತ್ತ ಎಲ್ಲವನ್ನೂ ಕೇಳಿ ತಿಳಿದ ಚತುರ ಯುವತಿಯಾದ ದುಗ್ಗಳೆ ಮಳಲಕ್ಕಿಯ ಗಂಟನ್ನು ಒಂದು ಕೈಯಲ್ಲಿ ಹಿಡಿದುಕೊಂಡು, ಇನ್ನೊಂದು ಕೈಯಲ್ಲಿ ಕಬ್ಬು ತೆಗೆದುಕೊಂಡು, 'ಒಂದೇ ಕಬ್ಬಿನಿಂದಾಗಬೇಕೆ ಸ್ವಾಮಿ?' ಎಂದು ಕೇಳಿದಳು. 'ನಿನಗೆ ಬೇಕಾದಷ್ಟು ತರಿಸಿಕೊ' ಎಂದು ದಾಸಿಮಯ್ಯ ನುಡಿಯಲು, ಇನ್ನಷ್ಟು ಕಬ್ಬುಗಳನ್ನು ತರಿಸಿದಳು. ಕೈಗಾಣದಿಂದ ರಸವನ್ನು ಹಿಂಡಿ ಸಿಪ್ಪೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿದಳು. ಅದರಿಂದ ಬೆಂಕಿಮಾಡಿ ಕಬ್ಬಿನ ಹಾಲನ್ನು ಕಾಯಲು ಇಟ್ಟಳು. ಅದರಲ್ಲಿ ಮಳಲಕ್ಕಿಯನ್ನು ಸುರಿದು, ಕಾದಮೇಲೆ

ಉಳಿದ ಹಾಲನ್ನು ಅದರ ಮೇಲೆ ಹಾಕಿದಳು. ಆಗ ಉಸುಕು ತಳದಲ್ಲಿ ಕುಳಿತು, ಮೇಲೆ ಪಾಯಸ ತೇಲತೊಡಗಲು ಅದನ್ನು ಬೇರೊಂದು ಪಾತ್ರೆಗೆ ಸುರುವಿ, ಉಸುಕಿಲ್ಲದ ಪಾಯಸವನ್ನು ದಾಸಿಮಯ್ಯನಿಗೆ ಪ್ರೀತಿಯಿಂದ ಎಡೆ ಮಾಡಿದ ದುಗ್ಗಳೆ ಆತನೊಡ್ಡಿದ ವಿಲಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣಳಾದಳು. ಆ ಚತುರ ಕನ್ಯೆಯನ್ನು ದಾಸಿಮಯ್ಯನು ಸಂಭ್ರಮದಿಂದ ಮದುವೆಯಾಗಿ ಸಂಸಾರಿಯಾದನು.

ಸತಿಪತಿಗಳಿಬ್ಬರೂ ಏಕೋಭಾವದಿಂದ ಸೀರೆ ನೆಯ್ಗೆಯ ಮಾರಿ, ಬಂದ ದ್ರವ್ಯದಿಂದ ಗುರು–ಲಿಂಗ–ಜಂಗಮ ಸೇವೆ ಮಾಡತೊಡಗುತ್ತಾರೆ. ಇವರಿಗೆ ನೆಯ್ಗೆಯ ಕಾಯಕವು ಶಿವಭಕ್ತಿ ಸಾಧನೆಗೆ ಬಹು ಸುಲಭ ಮಾರ್ಗವಾಗಿದ್ದಂತೆ, ಭಕ್ತಿ ಜ್ಞಾನಗಳೇ ಅವರು ನೆಯ್ಯುವ ದಿವ್ಯ ವಸ್ತ್ರಗಳ ಹಾಸು ಹೊಕ್ಕಾಗಿದ್ದವು. ಆದ್ದರ ವಚನಗಳನ್ನು ಹಾಡುತ್ತ, ದೇವನನ್ನು ನೆನೆಯುತ್ತ, ನೂಲುವುದು–ನೆಯ್ಯುವುದು ಅವರ ಶಿವಪೂಜೆಯ ಮಾಟವಾಗಿತ್ತು. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ತತ್ವ ಈ ದಂಪತಿಗಳದಾಗಿತ್ತು.

ಒಮ್ಮೆ ದಾಸಿಮಯ್ಯನು ಮಗ್ಗದ ಮುಂದೆ ಕುಳಿತು ರಾಮನಾಥಸ್ವಾಮಿಯ ಧ್ಯಾನದಲ್ಲಿ ನಿರತನಾಗುತ್ತ ಒಂದು ದಿವ್ಯತಮವಾದ ವಸ್ತ್ರವನ್ನು ನೆಯ್ಯತೊಡಗಿದನು. ನೆಯ್ಗೆಯ ಕೆಲಸ ಭರದಿಂದ ಸಾಗಿತ್ತು, ದುಗ್ಗಳೆಯ ಭಕ್ತಿಯಾದರೋ ನಿಸ್ಸಿಮವಾದುದು. ಗಂಡನ ಕೈಗೆ ನೂಲಿನ ಹುಂಡಿಗಳನ್ನು ಕೊಡುತ್ತ, ನೆಯ್ಯಲು ಬೇಕಾದ ಎಲ್ಲ ಪರಿಕರಗಳನ್ನು ಜೋಡಿಸುತ ನೆರವಾದಳು. ಹಗಲು–ರಾತ್ರಿಯೆನ್ನದೆ, ಆಹಾರ–ನಿದ್ರೆಯೆನ್ನದೆ ಬಟ್ಟೆ ನೆಯ್ಯುವ ಕೆಲಸ ಸಾಗಿತು. ಪತಿ–ಪತ್ನಿಗೆ ಶಿವಧ್ಯಾನವೇ ಊಟ–ನಿದ್ರೆಯಾಯಿತು; ಹರನಾಮವೇ ವಿಶ್ರಾಂತಿಯಾಯಿತು. ದಿನ–ತಿಂಗಳು–ವರುಷಗಳು ಉರುಳಿದವು. ಸುಮಾರು ಹನ್ನೆರಡು ವರುಷ ಪರ್ಯಂತರ ದಾಸಿಮಯ್ಯ ದುಗ್ಗಳೆಯರು ಅತ್ಯಮೂಲ್ಯವಾದ ವಸ್ತ್ರವನ್ನು ನೆಯ್ಯುತ್ತ ಶಿವಧ್ಯಾನದಲ್ಲಿ ಮಗ್ನರಾಗಿದ್ದಾರೆ.

ಸತಿಪತಿಗಳ ಭಕ್ತಿ, ನಿಷ್ಠೆಯ ಎಳೆಗಳು ಹಾಸುಹೊಕ್ಕಾಗಿ ನೆಯ್ದುಕೊಂಡಿದ್ದರ ಪರಿಣಾಮ ವಸ್ತ್ರದ ಕಣ ಕಣದಲ್ಲೂ ರಾಮನಾಥನ ಮಂತ್ರವೇ ತುಂಬಿ ತುಳುಕಿತು. ಅಂತಹ ದಿವ್ಯ ವಸ್ತ್ರವನ್ನು ಶಿವನಿಗೆ ಅರ್ಪಿಸಿ ದಾಸ–ದುಗ್ಗಳೆಯರು ಕೃತಾರ್ಥರಾದರು. ಈ ದಂಪತಿಗಳ ಭಕ್ತಿಗೆ ಮೆಚ್ಚಿದ ಶಿವನು ಅವರಿಗೆ 'ತವನಿಧಿ'ಯನ್ನು ದಯಪಾಲಿಸಿದನು. ಅಂದಿನಿಂದ ದಾಸಿಮಯ್ಯನು 'ತವನಿಧಿ ದಾಸಿಮಯ್ಯ'ನೆಂದೇ ಖ್ಯಾತನಾದನು. ಈ ಖ್ಯಾತಿಗೆ ದುಗ್ಗಳೆ ಅನುಕೂಲೆ. ಆದುದರಿಂದ ಕವಿ ಹರಿಹರನು ಹೇಳುವಂತೆ, 'ಆತಂಗೆ ಚಿತ್ತವಲ್ಲಭೆ ದುಗ್ಗಳಾದೇವಿ ಮಾತಿಂಗೆ ಪ್ರತಿಶಬ್ದವಿಲ್ಲ ಸದ್ಗುಣಭಾವಿ ಸತಿಪತಿಗಳಿಬ್ಬರೂ ಚಿತ್ತ ಬುದ್ಧಿಗಳಾಗೆ ಅತಿಶಯ ಸದಾಚಾರ ತಮಗೆ ಸಂಪದವಾಗೆ' ಎನ್ನುವ ಮಾತು ಅವರ ಒಪ್ಪುಳ್ಳ ಸಂಸಾರಕ್ಕೆ ಹಿಡಿದ ಕನ್ನಡಿಯಾಗಿದೆ.

ವಾಸಿಮಯ್ಯ ದುಗ್ಗಳೆಯರದು ಸಮರಸದ ದಾಂಪತ್ಯ. ಅದನ್ನು ಪ್ರತಿಬಿಂಬಿಸುವ ಇನ್ನೊಂದು ಧ್ವನಿಪೂರ್ಣ ಘಟನೆಯನ್ನು ನಾವಿಲ್ಲಿ ನೆನೆಯಬಹುದು. ಒಂದು ದಿನ ಇಬ್ಬರು ಜಂಗಮರು ದಾಸಿಮಯ್ಯನ ಮನೆಗೆ ಬಂದು, ತಮ್ಮಲ್ಲಿ ಉಂಟಾದ ಭಿನ್ನಾಭಿಪ್ರಾಯವನ್ನು ಸರಿಪಡಿಸಲು ವಿನಂತಿಸಿಕೊಂಡರು. ಆ ಭಿನ್ನಾಭಿಪ್ರಾಯಕ್ಕೆ ಒಳಗಾದ ಪ್ರಶ್ನೆ ಎಂದರೆ ಸಂಸಾರ ಸುಖವೋ? ಇಲ್ಲವೆ ವಿರಕ್ತಿ ಸುಖವೋ? ಮತ್ತು ಸಂಸಾರ ಶ್ರೇಷ್ಠವೋ? ಇಲ್ಲವೆ ವಿರಕ್ತಿ ಶ್ರೇಷ್ಠವೋ? ಎಂಬುದು. ಆಗ ದಾಸಿಮಯ್ಯನು ಸತಿಯಿಂದಲೇ ಸದ್ಗತಿಯು, ಸತಿಯಿಂದಲೇ ದುರ್ಗತಿಯು: ಎಂದು ಮಾರ್ಮಿಕವಾಗಿ ನುಡಿಯುತ್ತ, ಸನ್ಯಾಸಿ ಯಾಗುವುದಕ್ಕೂ, ಸಂಸಾರಿಯಾಗುವುದಕ್ಕೂ ಸತಿಯೇ ಕಾರಣವೆಂಬುದನ್ನು ಪ್ರಾಯೋಗಿಕವಾಗಿ ಹೇಳಲು ನಿರ್ಧರಿಸಿದನು. ಆವಗಾ ನಡುಮಧ್ಯಾಹ್ನವಾಗಿತ್ತು. ಆ ಜಂಗಮರನ್ನು ಮಗ್ಗದ ಹತ್ತಿರ ಕುಳ್ಳಿರಿಸಿದನು. ದುಗ್ಗಳೆಗೆ 'ದಾರ ಹರಿದಿದೆ ದೀಪ ತಾ' ಎಂದನು. ಆಕೆ ತಿರುಗಿ ಉತ್ತರಿಸದೆ ದೀಪ ತಂದಿಟ್ಟಳು. ತಲೆಯ ಬಳಿಯಲ್ಲಿಯೇ ಕುಂಚಿಗೆ ಇದ್ದರೂ 'ಕುಂಚಿಗೆ ಕೊಡು' ಎನ್ನಲು, ಅವಳು ಬಂದು ಕುಂಚಿಗೆಯನ್ನೆತ್ತಿಕೊಟ್ಟಳು. ಈತ ಆ ಇಬ್ಬರೂ ಜಂಗಮರನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಊಟ ಮಾಡುತ್ತಿದ್ದಾಗ ಬೇಕೆಂದೇ 'ಮೊನ್ನೆ ಮಾಡಿದ ಅಂಬಲಿ ಸುಡುತ್ತಿದೆ' ಎಂದಾಗ ಆಕೆ ಮೊರದಿಂದ ಗಾಳಿ ಬಿಸಿದಳು.

'ದಾಸಿಮಯ್ಯ ಇದೇಕೆ ಹೀಗೆ ವಿಲಕ್ಷಣವಾಗಿ ವರ್ತಿಸುತ್ತಿದ್ದಾನೆ? ಈತನ ಹೆಂಡತಿಗೂ ಬುದ್ಧಿ ಬೇಡವೇ?' ಎಂದು ಜಂಗಮರಿಬ್ಬರೂ ತಮ್ಮೊಳಗೆ ತಾವೇ ಯೋಚಿಸಿದರು. ಆಗ ದಾಸಿಮಯ್ಯನು 'ಪತಿಯನ್ನೇ ದೈವವೆಂದು ಬಗೆಯುವ ಸುಶೀಲೆಯಾದ ಇಂಥ ಸತಿಯಿದ್ದರೆ ಸಂಸಾರವೇ ಲೇಸು. ಎದುರುತ್ತರ ಕೊಡುವವಳಿದ್ದರೆ ಸನ್ಯಾಸವೇ ಲೇಸು' ಎಂದು ಅವರಿಗೆ ತನ್ನ ಅಭಿಪ್ರಾಯವನ್ನು ತಿಳಿಸಿದನು. ಇಲ್ಲಿ ಗೃಹಸ್ಥ ಜೀವನದ ಪರಸ್ಪರ ತಿಳುವಳಿಕೆಯನ್ನು ನಾವು ಮನಗಾಣಬಹುದಾಗಿದೆ.

ದುಗ್ಗಳೆ ದಾಸಿಮಯ್ಯನ ಪಾಲಿನ ಜಾಗರದ ಶಕ್ತಿ. ಸಕಾಲಿಕ ಸಮಯೋಚಿತ ಸಲಹೆ ನೀಡಿ, ಕುಡಿವರಿದು ಬೆಳೆಯುತ್ತಿದ್ದ ದಾಸಿಮಯ್ಯನ ಅನುಭಾವದ ಬಳ್ಳಿಗೆ ಆಸರೆಯ ಚಪ್ಪರವಾಗಿ ನಿಂತ ಸನ್ನಿವೇಶವೊಂದು ರೋಚಕವಾಗಿದೆ.

ಶಿವನಿಂದ ತವನಿಧಿಯನ್ನು ಪಡೆದ ಈ ದಂಪತಿಗಳ ದಾನಧರ್ಮಗಳು ದಿನದಿನಕ್ಕೂ ಹೆಚ್ಚುತ್ತ ಹೋದತ್ತವೆ. ಬೇಡಿದವರಿಗೆಲ್ಲ ದವಸವನ್ನು ನೀಡಿ, ಹಾರೈಸಿ ಕಳಿಸುವುದೇ ಅವರ ದಿನಚರಿಯಾಗಿತ್ತದೆ. ದಾಸಿಮಯ್ಯನಿಗೆ ಶಿವನಂತೆ ಕೊಡುವವರೂ ತನ್ನಂತೆ ಪಡೆವವರೂ ಇಲ್ಲವೆಂಬ ಗರ್ವ ಮೊಳಕೆಯೊಡೆದು ಚಿಗುರತೊಡಗುತ್ತದೆ. ದುಗ್ಗಳೆ ಮಾತ್ರ ಈ ಭಾವದಿಂದ ದೂರವಿರುತ್ತಾಳೆ. ದಾನವೀಯುವ ಸಂಭ್ರಮದಲ್ಲಿ ದಾಸಿಮಯ್ಯ ತನ್ನ ಕಾಯಕವನ್ನು ಮರೆತು ಬಿಟ್ಟಿದ್ದರಿಂದ, ಈಶ್ವರನ ಇಚ್ಛೆಯಂತೆ ಆತನಲ್ಲಿ ಮೊಳೆಯುತ್ತಿದ್ದ ಅಹಂಕಾರವನ್ನು ಮುರಿಯುವ ಪ್ರಸಂಗ ಎದುರಾತ್ತದೆ.

ಶಿವನಿತ್ತ ದಿವ್ಯದೃಷ್ಟಿಯಿಂದ ಮೂರನೇ ಕಣ್ಣನ್ನು ಪಡೆದು ನೆಲದಲ್ಲಿ ಅಡಗಿದ ಸಂಪತ್ತು ತನ್ನ ದಿವ್ಯದೃಷ್ಟಿಗೆ ಗೋಚರಿಸುತ್ತಿದ್ದರೂ ಅದನ್ನು ಪಡೆದುಕೊಳ್ಳದೆ ತನ್ನ ಕಾಯಕದಿಂದಲೇ ದಾಸೋಹವನ್ನು ನಡೆಸುತ್ತಿದ್ದ ಶಂಕರದಾಸಿಮಯ್ಯ. ನಿರಂಕಾರಿಯಾಗಿ ಕಾಯಕ ದಾಸೋಹಗಳನ್ನು ಮಾಡುತ್ತಿದ್ದ ಸೂಜಿಕಾಯಕದ ಶಂಕರದಾಸಿಮಯ್ಯ ಎಂಬ ಹೆಸರು ಪಡೆದು ತನ್ನ ಶಿಷ್ಯರೊಂದಿಗೆ ಮುದನೂರಿಗೆ ಬರುತ್ತ, ಊರು ಹತ್ತಿರವಾದಂತೆ ತಲೆಯ ಮೇಲೆ, ಎತ್ತು–ಬಂಡಿ ಮೇಲೆ ಧಾನ್ಯ ಕೊಂಡು ಹೋಗುತ್ತಿದ್ದ ಜನರನ್ನು ಕಂಡು, ಶಿವನು ದಾಸಿಮಯ್ಯನಿಗೆ ಕರುಣಿಸಿದ ಈ ತವನಿಧಿಯ ಸಂಭ್ರಮಕ್ಕೆ ಸಂತಸ ಪಡುತ್ತ ಮುದನೂರನ್ನು ಪ್ರವೇಶಿಸಿ ಅಲ್ಲಿಯ ರಾಮನಾಥ ದೇವಾಲಯದ ಪಕ್ಕದಲ್ಲಿಯೇ ಬಿಡಾರ ಹೂಡುತ್ತಾನೆ. ತನ್ನೂರಿಗೆ ಶಂಕರ ದಾಸಿಮಯ್ಯ ಬಂದ ಸುದ್ದಿ ಕೇಳಿ ದಾಸಿಮಯ್ಯನು ಹರ್ಷ ಪುಳಕಿತನಾಗಿ ಆತನಲ್ಲಿಗೆ ಹೋಗಿ ಸಾಷ್ಟಾಂಗವೆರಗಿ ಶಿವಾನುಭವ ಗೋಷ್ಠಿಯಲ್ಲಿ ತೊಡಗುತ್ತಾನೆ. ಅಷ್ಟೊತ್ತಿಗೆ ಶಂಕರ ದಾಸಿಮಯ್ಯನು ತನ್ನ ಶಿಷ್ಯನನ್ನು ಕರೆದು, 'ಎಲೆ ಮಗನೆ, ಧಾನ್ಯಕ್ಕೆ ಹೊರಡು' ಎನ್ನುತ್ತಾನೆ. ಆಗ ಜೇಡರದಾಸಿಮಯ್ಯನು 'ಹಣೆಗಣ್ಣಿದ್ದರೂ ಈತನಿಗೆ ಬಡತನ ತಪ್ಪಲಿಲ್ಲವೆ?' ಎಂದು ಮನದಲ್ಲಿ ವಿಸ್ಮಯ ಪಟ್ಟು, 'ದೇವಾ, ನನ್ನ ಮನೆಯಲ್ಲಿ ಸುಕುಮಾರ ಧಾನ್ಯವಿದೆ. ನೀವು ಇಲ್ಲಿ ಇರುವವರೆಗೂ ಭಿಕ್ಷೆಗೆ ಹೋಗಬೇಕಾದುದಿಲ್ಲ. ನಿಮಗಾಗಿ ಹತ್ತಿಪ್ಪತ್ತು ಮಣ ನೆಲ್ಲನ್ನು ಹೇರಿ ಕಳಿಸುತ್ತೇನೆ, ಅವನ್ನು ಕೈಕೊಳ್ಳಬೇಕು' ಎಂದು ನುಡಿಯುತ್ತಾನೆ.

ಆತನ ಹಮ್ಮಿನ ಮಾತುಗಳಿಗಾಗಿಯೇ ಕಾದಿದ್ದ ಶಂಕರದಾಸಿಮಯ್ಯನು ಮುಗುಳ್ನಗುತ್ತ, 'ನೀನು ಕೊಡುವವ, ನಾನು ಕೊಳ್ಳವವ ಹೌದೌದು'! ಎಂದು ವ್ಯಂಗ್ಯವಾಗಿ ನುಡಿಯುತ್ತ ತನ್ನ ಬಿಡಾರದ ಮುಂದಿನ ತಿಪ್ಪೆಯನ್ನು ಅಗೆಸಿ, ಅಲ್ಲಿದ್ದ ಹೊನ್ನ ಕಡವರಗಳನ್ನು ತೋರಿಸಿ, 'ನಿನಗೆ ಬೇಕಾದಷ್ಟು ತಗೆದುಕೊ' ಎನ್ನುತ್ತ, 'ತವನಿಧಿಯನ್ನು ಕೊಟ್ಟ ದೇವ ತಾನೇ ತೆಗೆದುಕೊಂಡ ಹೋಗು!' ಎಂದು ವಿಷಾದಪಟ್ಟನು. ಶಂಕರದಾಸಿಮಯ್ಯನ ಕಿಡಿನುಡಿಗೆ ಬೆರಗಾಗಿ, ಮನೆಗೆ ಮರಳಿದ ಗಂಡನನ್ನು ನೋಡಿ ದುಗ್ಗಳೆ ಮರುಗಿದಳು. 'ಇದೇನಿದೇನು! ಒಳಗೆ ತವನಿಧಿ ಬತ್ತಿ ಹೋಯಿತು; ಹೊರಗೆ ಭಕ್ತಿರಸ ಬರಿದಾಯಿತು! ಸತ್ಯ ಶರಣರ ಕೂಡ ಎದುರುತ್ತರ ಕೊಟ್ಟುದಲ್ಲದೆ ಹೀಗಾಗದು. ಏನಾಯಿತು? ಹೇಳಿ' ಎಂದು ಆಕೆ ಪ್ರಶ್ನಿಸಿದಾಗ ದಾಸಿಮಯ್ಯನು ಶರಣನೊಡನೆ ಮರೆತು ಸರಸವಾಡಿದ ಪರಿಯನ್ನು ಹೇಳಿದನು. ಅದನ್ನು ಕೇಳಿ ದುಗ್ಗಳೆ, "ಶಿವ ಶಿವಾ ಕೆಟ್ಟೆವಲ್ಲ! ದೇವರಲ್ಲಿ ಮುಕ್ತಿ ಬೇಡದೆ ನಾಲ್ಕು ಕಾಳು ನೆಲ್ಲು ಬೇಡಿ ಪಡೆದ ನಿಮಗೆ ಶರಣರೊಡನೆ ಗರ್ವದಿಂದ ನಡೆದುಕೊಳ್ಳುವಂತಾಯಿತೆ'? ಎಂದು ಗೋಳಾಡುತ್ತಾ, ಇದಕ್ಕೆ ಮುಂದಣ ಉಪಾಯವನ್ನು ಕಂಡುಕೊಳ್ಳುತ್ತಾಳೆ. ದುಗ್ಗಳೆ ಗಂಡನೊಡಗೂಡಿ ದೀನಳಾಗಿ ಶಂಕರದಾಸಿಮಯ್ಯನೆಡೆಗೆ ಬಂದು, ಅವನ ಪಾದತಲದಲ್ಲಿ ಪೊಡಮೊಟ್ಟು

"ದೇವಾ ಶಿಶುವಿನಲ್ಲಿ ನೀತಿಯುಂಟೆ?
ಪಶುವಿನಲ್ಲಿ ಬುದ್ದಿಯುಂಟೆ?
ಮತಿಹೀನನ ಮನ್ನಣೆಯುಂಟೆ?
ವಾಗ್ವಂಚಕರಲ್ಲಿ ಒಳನುಡಿಯುಂಟೆ?
ದೀನರ ದಾಕ್ಷಿಣ್ಯವುಂಟೆ?
ಎಲ್ಲಿ ಗುಣವನರಸುವುದೆ?
ತೊತ್ತಿನಲ್ಲಿ ತಪ್ಪನೆಣಿಸುವರೆ
ಸತಿಯ ಅಪರಾಧವನ್ನು ಪತಿ ಪರೀಕ್ಷಿಸುವುದೇ?"[1]

ಎಂದು ದುಃಖಿಸುತ ನಮ್ಮನ್ನು ಕರುಣಿಸಬೇಕೆಂದು ಗೋಗರೆಯುತ್ತಾಳೆ. ದುಗ್ಗಳೆಯ ದೈನ್ಯತೆಯನು ಕಂಡು, ಆಕೆಯ ಪತಿಯನ್ನು ಕ್ಷಮಿಸಿ, ಅವರಿಬ್ಬರಿಗೂ ಸುಪ್ರಸನ್ನನಾಗಿ ಮಾಯವಾಗಿದ್ದ ತವನಿಧಿಯು ಉಕ್ಕಿ ಹರಿಯುವಂತೆ ಕರುಣಿಸುತ್ತಾನೆ. ದಾಸಿಮಯ್ಯನಂತಹ ಅನುಭಾವಿಗೂ ಅಹಂಕಾರದ ಜೊಂಪು ಆವರಿಸುತ್ತಲಿದೆ ಪ್ರಸಂಗ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ದುಗ್ಗಳೆ ಸಮಚಿತ್ತದಿಂದ ಸಮಯೋಚಿತದ ಸಲಹೆಯನ್ನಿತ್ತು ಕಳೆದ ಭಾಗ್ಯ ಮರಳಿ ಹೊಂದಲು ನೆರವಾಗಿ, ಜಾಗರದ ಶಕ್ತಿಯಾಗಿ ನಿಲ್ಲುತ್ತಾಳೆ. ಅಂತೆಯೇ ಅವಳು ಅಗ್ಗಳದ ದುಗ್ಗಳೆ ಎನಿಸುತ್ತಾಳೆ.

ದುಗ್ಗಳಾದೇವಿಯು ಒಬ್ಬ ವಚನಕಾರ್ತಿಯೂ ಆಗಿರಬೇಕು. ಆಕೆಯ ವಚನಗಳು ಅಲಭ್ಯವಾಗಿರುವುದೊಂದು ದೊಡ್ಡ ಕೊರತೆ. ದುಗ್ಗಳೆಯ ಅನುಭಾವದ ವಚನವೊಂದು ಆಕೆಯ ವ್ಯಕ್ತಿತ್ವವನ್ನು ಪ್ರತಿನಿಧಿಸುವಂತಿದೆ.

"ಭಕ್ತನಾದರೆ ಬಸವಣ್ಣನಂತಾಗಬೇಕು.
ಜಂಗಮನಾದರೆ ಪ್ರಭುದೇವನಂತಾಗಬೇಕು.
ಯೋಗಿಯಾದರೆ ಸಿದ್ಧರಾಮನಂತಾಗಬೇಕು.
ಭೋಗಿಯಾದರೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದರೆ ನಮ್ಮ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯ ಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥ"[2]

'ಇಂತಿವರ ಪ್ರಸಾದವ ಕೊಂಡು ಸತ್ತ ಹಾಗಿರಬೇಕಲ್ಲದೆ ತತ್ವದ ಮಾತು ನಮಗೇಕಯ್ಯ' ಎಂಬಲ್ಲಿ ದುಗ್ಗಳೆಯ ಸಾರ್ಥಕ ಬದುಕಿನ ಅನುಭವವೇ ಹೆಪ್ಪುಗಟ್ಟಿ ನಿಂತಂತಿದೆ. ದುಗ್ಗಳೆಯ ಜೀವನದ ಇಂಥ ಅಪರೂಪದ ಘಟನೆಗಳನ್ನು ಚಿತ್ರಿಸುವ ಹೆಚ್ಚಿನ ವಚನಗಳಾದರೂ ದೊರೆತಿದ್ದರೆ, ಒಬ್ಬ ಅನುಭಾವಿ ಪುರುಷನ ಸರ್ವಾಂಗೀಣ ಉನ್ನತಿಗೆ ಒಬ್ಬ ಸ್ತ್ರೀಯ ತ್ಯಾಗ-ಪರಿಶ್ರಮಗಳು, ಶ್ರದ್ಧೆ, ಸಹಕಾರ, ನಂಬಿಕೆಗಳು ಎಷ್ಟು ಮೀಸಲಾಗಿರುತ್ತವೆ ಎಂಬುದು ಸ್ಪಷ್ಟವಾಗುತ್ತಿದ್ದವು. ಆದರೆ ಸದ್ಯ ಕೆಲವು ಗ್ರಂಥಗಳಲ್ಲಿ ಚದುರಿ ಹೋಗಿರಬಹುದಾದ ಅವಳ ವಚನಗಳು ಹಾಗೂ ಈತರ ಶರಣರ ವಚನಗಳ ಮತ್ತು ಕಾವ್ಯ ಕೃತಿಗಳ ಆಧಾರಗಳಿಂದ ನಡೆದಿರಬಹುದಾದ ಸನ್ನಿವೇಶಗಳನ್ನು ಒಟ್ಟುಗೂಡಿಸಿ ಜೇಡರದಾಸಿಮಯ್ಯನ ಬದುಕು ಮಹೋಜ್ವಲಗೊಳ್ಳಲು ನೆರವಾದ ಅಗ್ಗಳದ ಸತಿ ದುಗ್ಗಳೆಯ ಬದುಕಿನ ಚಿತ್ರವನ್ನು ಈ ಮೇಲಿನಂತೆ ಕಲ್ಪಿಸಲಾಗಿದೆ.

**ಕೊನೆಯ ಟಿಪ್ಪಣಿ :**


1. ವೀರಣ್ಣ ರಾಜೂರ (ಸಂ), ಶಿವಶರಣೆಯರ ವಚನ ಸಂಪುಟ-5, ಪುಟ-305.
2. ಅದೇ, ಪುಟ-305